# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

## ಪತ್ರಿಕಾ ಪ್ರಕಟಣೆ

### ವಿಷಯ: ನಿಗಮದ ಮುಂಗಡ ಬುಕ್ಕಿಂಗ್ ಕೌಂಟರ್‌ಗಳಿಗೂ ಅನಿರೀಕ್ಷಿತ ಭೇಟಿ ಮತ್ತು ತಪಾಸಣೆ ಹಾಗೂ ತಮಿಳುನಾಡಿನ ತಿರುಕೋಯಿಲೂರಿನಲ್ಲಿರುವ ಮುಂಗಡ ಟಿಕೇಟ್ ಕಾಯ್ದಿರಿಸುವ ಕೌಂಟರ್‌ನಲ್ಲಿ ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆಯುತ್ತಿದ್ದ ಪ್ರಕರಣದ ಬಗ್ಗೆ

ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡ ಟಿಕೇಟ್ ಕಾಯ್ದಿರಿಸಲು ಅನುಕೂಲವಾಗುವಂತೆ, ರಾಜ್ಯ ಹಾಗೂ ಅಂತರರಾಜ್ಯಗಳಲ್ಲಿ ಮುಂಗಡ ಟಿಕೇಟ್ ಕಾಯ್ದಿರಿಸುವ ಕೌಂಟರ್‌ಗಳು ನಿಗಮದ 129 ಮತ್ತು ಖಾಸಗಿ ಫ್ರಾಂಚೈಸ್‌ನ 599 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ತಮಿಳುನಾಡಿನ ತಿರುಕೋಯಿಲೂರಿನಲ್ಲಿರುವ ಫ್ರಾಂಚೈಸ್ (ಖಾಸಗಿ) ಮುಂಗಡ ಬುಕ್ಕಿಂಗ್ ಕೌಂಟರ್‌ನವರು ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆಯುತ್ತಿರುವುದಾಗಿ ಪ್ರಯಾಣಿಕರಿಂದ ದೂರುಗಳು ಬಂದಿರುತ್ತವೆ.

ಈ ಹಿನ್ನೆಲೆಯಲ್ಲಿ, ಬೆಂಗಳೂರು ಕೇಂದ್ರೀಯ ವಿಭಾಗದಿಂದ ಒಂದು ತಂಡವನ್ನು ರಚಿಸಿ, ಸದರಿ ಕೌಂಟರ್‌ಗೆ ಅನಿರೀಕ್ಷಿತ ಭೇಟಿ ನೀಡಲು ಆದೇಶಿಸಲಾಯಿತು. ಅದರಂತೆ, ರಾತ್ರಿ ಸುಮಾರು 09:30ರ ಸಮಯಕ್ಕೆ ನಿಗಮದ ವತಿಯಿಂದ ಪರವಾನಗಿ ಪಡೆದಿದ್ದ ತಿರುಕೋಯಿಲೂರಿನ ಅಧಿಕೃತ ಮುಂಗಡ ಟಿಕೆಟ್ ಬುಕ್ಕಿಂಗ್ ಕೌಂಟರ್‌ಗೆ ಪ್ರಯಾಣಿಕರ ಸೋಗಿನಲ್ಲಿ ಭೇಟಿ ನೀಡಿ, ತಿರುಕೋಯಿಲೂರಿನಿಂದ ಬೆಂಗಳೂರಿಗೆ ಪ್ರಯಾಣಿಸಲು ಎರಡು ಬಾರಿ ಪ್ರತ್ಯೇಕವಾಗಿ ಎರಡು ಟಿಕೆಟ್‌ಗಳನ್ನು ಖರೀದಿಸಿರುತ್ತಾರೆ. ಮೊದಲನೇ ಬಾರಿ ಒಂದು ಟಿಕೆಟ್‌ಗೆ ರೂ.215/- ರಂತೆ ಒಟ್ಟು ರೂ.430/- ಪಡೆಯುವ ಬದಲು ರೂ.500/- ಪಡೆದಿದ್ದು, ಇದರಿಂದ ನಿಗದಿತ ದರಕ್ಕಿಂತ ರೂ.70/- ಹೆಚ್ಚಿಗೆ ಪಡೆದಿರುತ್ತಾರೆ. ಎರಡನೇ ಬಾರಿ ಒಂದು ಟಿಕೆಟ್‌ಗೆ ರೂ.215/- ರಂತೆ ಒಟ್ಟು ರೂ.430/- ಪಡೆಯುವ ಬದಲು ರೂ.480/- ಪಡೆದಿದ್ದು, ಇದರಿಂದ ನಿಗದಿತ ದರಕ್ಕಿಂತ ರೂ.50/- ಹೆಚ್ಚಿಗೆ ಪಡೆದಿರುತ್ತಾರೆ. ಮುಂದುವರೆದಂತೆ, ಸದರಿ ತಂಡವು ತಿರುಕೋಯಿಲೂರಿನಿಂದ ಬೆಂಗಳೂರಿಗೆ ನಿರ್ಗಮಿಸುವ ನಿಗಮದ ಇನ್ನಿತರೆ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರನ್ನು ವಿಚಾರಣೆ ಮಾಡಲಾಗಿ, ಅವರುಗಳಿಂದಲೂ ಸಹ ತಿರುಕೋಯಿಲೂರಿನ ಮುಂಗಡ ಬುಕ್ಕಿಂಗ್ ಕೌಂಟರ್‌ನವರು ನಿಗದಿತ ದರಕ್ಕಿಂತ ಹೆಚ್ಚಿನ ದರವನ್ನು ವಸೂಲಿ ಮಾಡಿರುವುದು ತಿಳಿದುಬಂದಿರುತ್ತದೆ.

ಈ ಸಂಬಂಧ, ತಿರುಕೋಯಿಲೂರಿನ ಮುಂಗಡ ಬುಕ್ಕಿಂಗ್ ಕೌಂಟರ್‌ನವರಿಗೆ ನೋಟೀಸು ನೀಡುವುದರ ಜೊತೆಗೆ ಅವರ ಕೌಂಟರ್‌ನಲ್ಲಿ ನಿಗಮದ ವಾಹನಗಳಿಗೆ ಮುಂಗಡ ಬುಕ್ಕಿಂಗ್ ಮಾಡುವುದನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿರುತ್ತದೆ.

ಸದರಿ ಮುಂಗಡ ಟಿಕೇಟ್ ಕಾಯ್ದಿರಿಸುವ ಕೇಂದ್ರಗಳಲ್ಲಿನ ವ್ಯವಹಾರವು ಪಾರದರ್ಶಕತೆಯಿಂದ ಕೂಡಿರಬೇಕು ಹಾಗೂ ಸಾರ್ವಜನಿಕ ಪ್ರಯಾಣಿಕರು ಕಾಯ್ದಿರಿಸುವ ಟಿಕೇಟ್‌ಗಳಿಗೆ ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆಯಬಾರದು. ಮುಂದಿನ ದಿನಗಳಲ್ಲಿ ನಿಗಮದ ಎಲ್ಲಾ ವಿಭಾಗಗಳಲ್ಲಿಯೂ ಈ ರೀತಿಯ ದಿಢೀರ್ ತಪಾಸಣಾ ಕಾರ್ಯಚರಣೆ ನಡೆಸಬೇಕು ಹಾಗೂ ಈ ರೀತಿಯ ಕೃತ್ಯಗಳಲ್ಲಿ ಭಾಗಿಯಾದ ಮುಂಗಡ ಟಿಕೇಟ್ ಕಾಯ್ದಿರಿಸುವ ಕೇಂದ್ರಗಳ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳುವುದಲ್ಲದೇ, ಕಪ್ಪು ಪಟ್ಟಿಗೆ ಕೂಡ ಸೇರಿಸಲಾಗುವುದೆಂದು **ಶ್ರೀ.ಶಿವಯೋಗಿ ಸಿ.ಕಳಸದ ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು,** ಎಚ್ಚರಿಕೆ ನೀಡಿರುತ್ತಾರೆ.

ಸಾರ್ವಜನಿಕರು ಇಂತಹ ಯಾವುದೇ ಪ್ರಕರಣಗಳು ಹಾಗೂ ದೂರುಗಳಿದ್ದಲ್ಲಿ awatar@ksrtc.org ಹಾಗೂ 7760990034/35, 080-49596666 ಸಂಪರ್ಕಿಸಲು ಕೋರಿದೆ.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**